**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 389/2012**

**ಸಿ.ಡಬ್ಲ್ಯೂ- 4 ಪಿ.ಡಬ್ಲ್ಯೂ- 5**

| | | |
|---|---|---|
| ಸಾಕ್ಷಿದಾರರ ಹೆಸರು | : | ಗುರಣ್ಣ ಹನುಮಂತರಾಯ ಮಾಡಗಿ |
| ತಂದೆಯ/ ಗಂಡನ ಹೆಸರು | : | ಹನುಮಂತರಾಯ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಅರಣ್ಯ ರಕ್ಷಕರು |
| ವಾಸ ಸ್ಥಳ | : | ಬಸವನ ಬಾಗೇವಾಡಿ |

**ದಿನಾಂಕ 05.06.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2010 ರಿಂದ 2013 ರವರೆಗೆ ಅಂತರಸಂತೆ ಅರಣ್ಯ ವಲಯದಲ್ಲಿ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ15.04.2011 ರಂದು ಅಂತರಸಂತೆಯ APC ಕ್ಯಾಪ್ ಆದ ಕಲ್ಲ್ ಹಳ್ಳ ಕ್ಯಾಪ್ ನಲ್ಲಿ ಇದ್ದಾಗ ಖಚಿತ ಮಾಹಿತಿ ಬಂದ ಮೇರೆಗೆ ಉದ್ಬೂರು ಗಸ್ತು ಬೆಳತ್ತೂರು ಕಾಲುದಾರಿಯಲ್ಲಿ ನಾನು ಚಾಸಾ 2 ಮತ್ತು 3 ಕಾಯುತ್ತಾ ಕುಳಿತಾಗ 3 ಜನ ಆಸಾಮಿಗಳು ಬರುತ್ತಿದ್ದು 2 ನ್ನು ಹಿಡಿದಿರುತ್ತೇವೆ ಒಬ್ಬರು ತಪ್ಪಿಸಿಕೊಂಡಿರುತ್ತಾರೆ. ಹಿಡಿದವರ ಹೆಸರು ಚಂದ್ರ ಮತ್ತು ಕುಳ್ಳಯ್ಯ ಎಂದು ತಿಳಿಸಿರುತ್ತಾರೆ. ಚಂದ್ರ ರವರನ್ನು ಪರಿಶೀಲಿಸಿದಾಗ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ 5 ಚಿರತೆ ಉಗುರು ಇದ್ದು, ಇನ್ನೊಂದು ಪ್ಲಾಸ್ಟಿಕ್ ಕವರ್ ನಲ್ಲಿ 2 ಚಿರತೆ ಹಲ್ಲು ಇತ್ತು. ಕುಳ್ಳಯ್ಯನ ಬಳಿ 1 kg ಅಷ್ಟು ಕೊಳೆತ ಮೂಳೆ ಇತ್ತು. ತಪ್ಪಿಸಿಕೊಂಡವನ ಬಳಿಯಲ್ಲಿ ಒಂದು ಗೂಬೆ ಇತ್ತು. ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಆರೋಪಿತರ ಬಳಿ ಸದರಿ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ವರದಿ ತಯಾರಿಸಿ ಕಛೇರಿಗೆ

ತಂದಿರುತ್ತೇವೆ. ಸದರಿ ವಸ್ತುಗಳ ಬಗ್ಗೆ ವಿಚಾರಿಸಿದಾಗ ಮೊದಲು ಸತ್ತು ಬಿದ್ದಿದ್ದ ಚಿರತೆಯಿಂದ ತಂದಿರುತ್ತೇವೆ ಎಂದು ತಿಳಿಸಿರುತ್ತಾರೆ. ನಂತರ ಆಸಾಮಿಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋದಾಗ ಯಾವುದೇ ಕುರುಹುಗಳು ಕಂಡು ಬಂದಿರುವುದಿಲ್ಲ. ಸದರಿ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತೇವೆ. ಆರೋಪಿ ಒಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ. ಅಮಾನತ್ತುಪಡಿಸಿಕೊಂಡ ಸಮಯದಲ್ಲಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ 2 ಮತ್ತು 3 ಎಂದು ಗುರುತಿಸಲಾಗಿದೆ. ನಿಪಿ 1 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ 1 ಸಿ, ನಿಪಿ 2 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ 2 ಸಿ, ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದು ಘಟನೆ ದಿನ ನೋಡಿದ್ದು, ಇಂದು 2 ನೇ ಬಾರಿಗೆ ನೋಡುತ್ತಿದ್ದೇನೆ ಎಂದು ಹೇಳುತ್ತಾರೆ. ಮಾಹಿತಿ ಬಂದ ವಿಚಾರವನ್ನು ಚಾಸಾ 2 ರವರು ತಿಳಿಸಿರುತ್ತಾರೆ. ಮಾಹಿತಿ ಬಂದಾಗ ನಾವು ಗಸ್ತಿನಲ್ಲಿ ಇದ್ದೇವು. ಆರೋಪಿತರು ಮುದ್ದೆಮಾಲುಗಳನ್ನು ಬಸವರಾಜು ಎಂಬುವವರಿಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೆ ಎಂದರೆ ಬಸವರಾಜು ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ್ಥಳ ಮಹಜರನ ಚೆಕ್ಕು ಬಂದಿ ಪೂರ್ವಕ್ಕೆ, ಮೀಸಲು ಅರಣ್ಯ, ಪಶ್ಚಿಮಕ್ಕೆ ಊರುಗಳು, ಉತ್ತರಕ್ಕೆ ಮಾಳದಾಡಿ ರಸ್ತೆ, ದಕ್ಷಿಣಕ್ಕೆ ಡಾಂಬರು ರಸ್ತೆ. ಸದರಿ ದಿನ ನಾವು ಆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**